ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 1725
ಮಾನ್ಯ ಸದಸ್ಯರ ಹೆಸರು	: ಶ್ರೀ ಆರ್.ಬಿ ತಿಮ್ಮಾಪುರ (ವಿಧಾನ ಸಭಾ ಕ್ಷೇತ್ರದಿಂದ : ಚುನಾಯಿತರಾದವರು)
ಉತ್ತರಿಸಬೇಕಾದ್ದ ದಿನಾಂಕ	: 22.03.2021
ಉತ್ತರಿಸುವ ಸಚಿವರು	: ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರಸಂ	ಪ್ರಶ್ನೆಗಳು	ಉತ್ತರ
ಅ)	ಬಾಗಲಕೋಟೆ ಜಿಲ್ಲೆಯ ಮುದೋಳ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?	ಬಾಗಲಕೋಟೆ ಜಿಲ್ಲೆಯ ಮುಧೋಳ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ: 41
ಆ)	ಈ ಹುದ್ದೆಗಳು ಕಳೆದ ಎಷ್ಟು ವರ್ಷಗಳಿಂದ ಖಾಲಿ ಇವೆ? ಹಾಗೂ ಖಾಲಿ ಇರಲು ಕಾರಣಗಳೇನು?	ಕಾಲಕಾಲಕ್ಕೆ ನಿವೃತ್ತಿ/ವರ್ಗಾವಣೆ/ಪದೋನ್ನತಿಯಿಂದ ಹುದ್ದೆಗಳು ಖಾಲಿ ಇವೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಇ)	ಕೂಡಲೇ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಆಕುಕ 19 ಹೆಚ್‌ಎಸ್‌ಡಿ 2021

(ಡಾ|| ಕೆ ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-1

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಯ ವಿವರ

ಕ್ರ.ಸಂ	ಹುದ್ದೆಯ ಹೆಸರು	ಮಂಜೂರು	ಕಾರ್ಯನಿರತ	ಖಾಲಿ	ಷರಾ
01	ಹಿರಿಯ ವೈದ್ಯಾಧಿಕಾರಿಗಳು	1	1	0	–
02	ಪಿಜಿಷಿಯನ್	1	1	0	–
03	ಸರ್ಜನ್	1	1	0	–
04	ಇ.ಎನ್.ಟಿ	1	0	1	15.09.2014 ರಿಂದ ಖಾಲಿಯಿದೆ. (ಎನ್.ಹೆಚ್.ಎಂ ಅಡಿಯಲ್ಲಿ ಬಿಡ್ ಮೇಲೆ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ)
05	ಆರ್ಥೋಪೆಡಿಶಿಯನ್	1	1	0	–
06	ಸ್ತ್ರೀರೋಗ ತಜ್ಞರು	1	1	0	–
07	ನೇತ್ರ ತಜ್ಞರು	1	0	1	15.09.2014 ರಿಂದ ಖಾಲಿಯಿರುತ್ತದೆ.
08	ದಂತ ವೈದ್ಯಾಧಿಕಾರಿಗಳು	1	1	0	–
09	ಚರ್ಮ ರೋಗ ತಜ್ಞರು	1	0	1	01.12.2010 ರಿಂದ ಖಾಲಿ ಇದೆ.
10	ಮಕ್ಕಳ ತಜ್ಞರು	1	0	1	ದಿನಾಂಕ:01.11.2020 ರಿಂದ ಖಾಲಿ ಇದೆ.
11	ಅರವಳಿಕೆ ತಜ್ಞರು	1	1	0	–
12	ಸಹಾಯಕ ಆಡಳಿತ ಅಧಿಕಾರಿಗಳು	1	1	0	–
13	ನರ್ಸಿಂಗ್ ಸುಪರಿನ್‌ಟೆಂಡೆಂಟ್	1	0	1	15.09.2014 ರಿಂದ ಖಾಲಿ ಇರುತ್ತದೆ.
14	ಕಚೇರಿ ಅಧೀಕ್ಷಕರು	1	0	1	ದಿನಾಂಕ:01.08.2020 ರಿಂದ ಖಾಲಿ ಇದೆ.
15	ಪ್ರಥಮ ದರ್ಜೆ ಸಹಾಯಕರು	2	0	2	ದಿನಾಂಕ:15.09.2014 ರಿಂದ ಖಾಲಿಯಿರುತ್ತದೆ, ಮತ್ತೊಂದು ದಿನಾಂಕ:07.06.2016 ರಿಂದ ಖಾಲಿ ಇದೆ.

16	ದ್ವಿತೀಯ ದರ್ಜೆ ಸಹಾಯಕರು	2	0	2	ದಿನಾಂಕ:17.11.2014 ರಿಂದ ಖಾಲಿ ಇದೆ. ಮತ್ತೊಂದು ದಿನಾಂಕ:23.06.2016 ರಿಂದ ಖಾಲಿಯಿರುತ್ತದೆ.
17	ಕ್ಲರ್ಕ್-ಕಮ್-ಟೈಪಿಸ್ಟ್	1	0	1	15.09.2014 ರಿಂದ ಖಾಲಿ ಇದೆ.
18	ಹಿರಿಯ ಫಾರ್ಮಸಿ ಅಧಿಕಾರಿ	1	1	0	–
19	ಫಾರ್ಮಸಿ ಅಧಿಕಾರಿ	2	2	0	–
20	ಕ್ಷ-ಕಿರಣ ತಂತ್ರಜ್ಞರು	2	2	0	–
21	ಹಿರಿಯ ಪ್ರಯೋಗಶಾಲಾ ತಂತ್ರಜ್ಞರು	1	1	0	–
22	ಕಿರಿಯ ಪ್ರಯೋಗಶಾಲಾ ತಂತ್ರಜ್ಞರು	1	1	0	–
23	ಶುಶ್ರೂಷ ಅಧಿಕಾರಿ	20	19	1	ದಿನಾಂಕ:28.02.2020 ರಿಂದ ಖಾಲಿ ಇದೆ.
24	ವಾಹನ ಚಾಲಕರು	2	2	0	–
25	ನೇತ್ರಾಧಿಕಾರಿಗಳು	1	1	0	–
26	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	2	1	1	ದಿನಾಂಕ:04.08.2017 ರಿಂದ ಖಾಲಿ ಇದೆ.
27	ಗ್ರೂಪ್-ಡಿ	33	5	28	15.09.2014 ರಿಂದ ಖಾಲಿ ಇದೆ. (ಹೊರ ಗುತ್ತಿಗೆ ಆಧಾರದ ಮೇಲೆ 20 ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ)
	ಒಟ್ಟು	**84**	**43**	**41**	

ಅನುಬಂಧ-2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಜ್ಞರು/ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ವಿಶೇಷ ನೇಮಕಾತಿ ಸಮಿತಿಯಿಂದ ನೇರ ನೇಮಕಾತಿ ಮುಖಾಂತರ 1460 ತಜ್ಞ ವೈದ್ಯರುಗಳ ಹುದ್ದೆಗಳನ್ನು(636 ಬ್ಯಾಕ್‌ಲಾಗ್ ಒಳಗೊಂಡಂತೆ), 1265 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು(19 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಹಾಗೂ 90 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು (02 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಭರ್ತಿ ಮಾಡಲು ಈಗಾಗಲೇ ಅಧಿಸೂಚನೆ ಸಂಖ್ಯೆ:ಎಸ್‌ಆರ್‌ಸಿ/68/2019-20, ದಿ:10.09.2020 ನ್ನು ಹೊರಡಿಸಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದ್ದು, ದಾಖಲೆಗಳ ಪರಿಶೀಲನೆ ಮುಗಿದಿರುತ್ತದೆ. ತಾತ್ಕಾಲಿಕ ಪಟ್ಟಿಯನ್ನು ಪ್ರಚುರಪಡಿಸುವ ಹಂತದಲ್ಲಿದೆ.

ಕಿರಿಯ ಆರೋಗ್ಯ ಸಹಾಯಕರು:

ಆಕುಕ ಇಲಾಖೆಯಲ್ಲಿ ಒಟ್ಟು 9850 ಕಿರಿಯ ಆರೋಗ್ಯ ಸಹಾಯಕ ಹುದ್ದೆಗಳು ಮಂಜೂರಾಗಿದ್ದು, ಖಾಲಿಯಿದ್ದ ಹುದ್ದೆಗಳ ಪೈಕಿ 2124 ಹುದ್ದೆಗಳನ್ನು 2018ನೇ ಸಾಲಿನಲ್ಲಿ ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಭರ್ತಿ ಮಾಡಲಾಗಿದ್ದು, ಒಟ್ಟಾರೆ 7123 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ 2727 ಹುದ್ದೆಗಳು ಖಾಲಿಯಿರುತ್ತವೆ.

ಶುಶ್ರೂಷಕರು:

ಆಕುಕ ಇಲಾಖೆಯಲ್ಲಿ ಒಟ್ಟು 8471 ಶುಶ್ರೂಷಕರ ಹುದ್ದೆಗಳು ಮಂಜೂರಾಗಿದ್ದು. ಖಾಲಿಯಿದ್ದ 4551 ಹುದ್ದೆಗಳ ಪೈಕಿ ಮೊದಲನೇ ಹಂತದಲ್ಲಿ 981 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಜೊತೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ 550 ಹೆಚ್‌ಎಸ್‌ಹೆಚ್ 2016 ದಿನಾಂಕ 27.05.2017ರಲ್ಲಿ ಶುಶ್ರೂಷಕರು (ಡಿಪ್ಲಮೋ ನರ್ಸಿಂಗ್)-889 ಹುದ್ದೆಗಳಿಗೆ ರಾಜ್ಯವಲಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಶುಶ್ರೂಷಕರುಗಳಿಗೆ ಕೃಪಾಂಕ ಮತ್ತು ವಯೋಮಿತಿ ಸಡಿಲಿಕೆ ಸೌಲಭ್ಯಗಳನ್ನು ನೀಡಿ ಸರ್ಕಾರವು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ದಿನಾಂಕ:16.07.2020ರಲ್ಲಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಚುರ ಪಡಿಸಲಾಗಿದ್ದು, ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪೈಕಿ ನೈಜತೆ ವರದಿಗಳು ಸ್ವೀಕೃತವಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲಾಗಿರುತ್ತದೆ. ಪ್ರಸ್ತುತ 5790 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, 2681 ಹುದ್ದೆಗಳು ಖಾಲಿಯಿರುತ್ತವೆ. ಇದರ ಜೊತೆಗೆ 5778 ಶುಶ್ರೂಷಕರನ್ನು ಎನ್.ಹೆಚ್.ಎಂ. ಮುಖಾಂತರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞರು ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಆಕುಕ ಇಲಾಖೆಯಲ್ಲಿ 2932 ಫಾರ್ಮಾಸಿಸ್ಟ್ ಹುದ್ದೆಗಳು ಮಂಜೂರಾಗಿದ್ದು, 1974 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಹಾಗೂ 2411 ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳು ಮಂಜೂರಾಗಿದ್ದು, 1821 ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರದ ಪತ್ರ ಸಂಖ್ಯೆ: ಆಕುಕ 709 ಹೆಚ್‌ಎಸ್‌ಎಂ 2017, ದಿನಾಂಕ:03.08.2019ರಲ್ಲಿ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಫಾರ್ಮಾಸಿಸ್ಟ್, ಕ್ಷ-ಕಿರಣ ತಂತ್ರಜ್ಞರು

--2

ಹಾಗೂ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 843 ವೆಚ್ಚ-5/2018, ದಿನಾಂಕ:26.07.2019ರಲ್ಲಿ ನೀಡಿರುವ ಸಹಮತಿ ಪ್ರಕಾರ ಈ ಕೆಳಕಂಡಂತೆ ಭರ್ತಿ ಮಾಡಲು ಅನುಮೋದನೆಯನ್ನು ನೀಡಿರುತ್ತಾರೆ.

Sl. No.	Designation	No. of Posts				
		2019-20		2020-21		Total
		Regular	Outsource	Regular	Outsource	
01.	Jr. Lab Technician	150	150	-	-	300
02.	X-Ray Technician	08	-	-	-	08
03.	Pharmacist	200	200	200	200	800

ಸರ್ಕಾರದ ಆದೇಶದ ಪ್ರಕಾರ ಹೊರ ಗುತ್ತಿಗೆ ಆಧಾರದ ಮೇಲೆ 150 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರು ಮತ್ತು 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಭರ್ತಿ ಮಾಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ. ಅಲ್ಲದೇ ಎನ್.ಹೆಚ್.ಎಂ. ಮುಖಾಂತರ 620 ಫಾರ್ಮಾಸಿಸ್ಟ್ ಹುದ್ದೆಗಳನ್ನು ಹಾಗೂ 1621 ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಂತ್ರಜ್ಞರನ್ನು ಗುತ್ತಿಗೆ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಮುಂದುವರೆದು, ಇಲಾಖೆಯಲ್ಲಿ ಖಾಲಿ ಇರುವ 150 ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಂತ್ರಜ್ಞರು, 08 ಕ್ಷ-ಕಿರಣ ತಂತ್ರಜ್ಞರು ಹಾಗೂ 400 ಫಾರ್ಮಾಸಿಸ್ಟ್ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಪರಿಶೀಲಿಸಲಾಗುತ್ತಿದೆ.

ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಖಾಲಿ ಇರುವ 293 ಅರೆ ವೈದ್ಯಕೀಯ ಹುದ್ದೆಗಳನ್ನು (ಗ್ರೂಪ್ 'ಬಿ' ವೃಂದದ 10 ಹುದ್ದೆಗಳು ಮತ್ತು ಗ್ರೂಪ್ 'ಸಿ' ವೃಂದದ 283 ಹುದ್ದೆಗಳು) ನೇರ ನೇಮಕಾತಿ ಮುಖೇನ ಭರ್ತಿ ಮಾಡಿಕೊಳ್ಳಲು ಪರಿಶೀಲಿಸಲಾಗುತ್ತದೆ.